356(4698); ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನ ಬಾಗೇವಾಡಿ); ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು; ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಬಿಜಾಪುರ ಜಿಲ್ಲೆ ದೇವರ ಗೆಣ್ಣೂರು ಪುನರ್ವಸತಿ ಕೇಂದ್ರಕ್ಕೆ ಹೊಸ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡುವಂತೆ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದೇ;

ಆ) ದೇವರ ಗೆಣ್ಣೂರು ಪುನರ್ವಸತಿ ಕೇಂದ್ರದ ಸುತ್ತಮುತ್ತಲಲ್ಲಿ ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯಿಂದ ಸರ್ಕಾರದಿಂದ ಪ್ರೌಢಶಾಲೆಗಳು ನಡೆಯದೇ ಇರುವುದು ಸರ್ಕಾರದ ಗಮನದಲ್ಲಿ ಇದೆಯೇ;

ಇ) ಇಲ್ಲಿ ಸರ್ಕಾರಿ ಪ್ರೌಢಶಾಲೆಯ ಅವಶ್ಯಕತೆ ಇದ್ದುದನ್ನು ಮನಗಂಡು, ಸರ್ಕಾರ ಪ್ರಸ್ತಾಪಿತ ಈ ಹೊಸ ಪ್ರೌಢಶಾಲೆಗೆ ಮಂಜೂರಾತಿ ನೀಡಲು ಏನು ಕ್ರಮ ಕೈಗೊಂಡಿದೆ;

ಈ) ಯಾವ ನಿರ್ದಿಷ್ಟ ಕಾಲ ಮಿತಿಯೊಳಗಾಗಿ ಹೊಸ ಸರ್ಕಾರ ಪ್ರೌಢಶಾಲೆಯನ್ನು ಮಂಜೂರು ಮಾಡಲಾಗುವುದು?

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು

ಅ) ಪ್ರಸ್ತಾವನೆ ಬಂದಿದೆ.

ಆ) ದೇವರಗೆಣ್ಣೂರು ಪುನರ್ವಸತಿ ಕೇಂದ್ರದ 10 ಕಿ.ಮೀ. ಅಂತರದಲ್ಲಿರುವ ಕಳ್ಳಕಬಿಟ್ಟಗಿ ಗ್ರಾಮದಲ್ಲಿ 01 ಸರ್ಕಾರಿ ಪ್ರೌಢಶಾಲೆ ಇದೆ ಮತ್ತು 09 ಕಿ.ಮೀ. ಅಂತರದಲ್ಲಿರುವ ಗೋಣಸಗಿ ಗ್ರಾಮದಲ್ಲಿ 01 ಅನುದಾನಿತ ಪ್ರೌಢಶಾಲೆ ಇರುತ್ತದೆ.

ಇ,ಈ) 2005–06ನೇ ಸಾಲಿನ ಉಪ ಮುಖ್ಯಮಂತ್ರಿಯವರ ಆಯವ್ಯಯದ ಭಾಷಣದಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿದೆ:–

" ಡಾ॥ ನಂಜುಂಡಪ್ಪ ಸಮಿತಿಯು ಗುರುತಿಸಿರುವ ಹಿಂದುಳಿದ ಎಲ್ಲಾ 114 ತಾಲ್ಲೂಕುಗಳಲ್ಲಿ ನೂತನ ಪ್ರೌಢಶಾಲೆಗಳನ್ನು 2005–06ನೇ ಸಾಲಿನಲ್ಲಿ ತೆರೆಯಲು ಉದ್ದೇಶಿಸಿದ್ದೇನೆ."

ಅದರಂತೆ ತಾಲ್ಲೂಕಿಗೆ ಒಂದರಂತೆ 114 ಶಾಲೆಗಳನ್ನು ಪ್ರಾರಂಭಿಸಲು ಆಡಳಿತಾತ್ಮಕ ಮಂಜೂರಾತಿ ಆದೇಶ ಹೊರಡಿಸಿದೆ. ಅದರಲ್ಲಿ ಬಿಜಾಪುರ ತಾಲ್ಲೂಕಿನ ಕನ್ನೂರು ಗ್ರಾಮಕ್ಕೆ ಕನ್ನಡ ಮಾಧ್ಯಮದ ಬಾಲಕಿಯರ ಪ್ರೌಢಶಾಲೆಯನ್ನು ಮಂಜೂರು ಮಾಡಲಾಗಿದೆ.